**4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್.ಸಿ. ನ್ಯಾಯಾಲಯ, ಅಥಣಿ**

**ಸಿ.ಸಿ. ನಂ. 1791/2018**

**ಸಾಕ್ಷಿಃ ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 4**

| | |
|---|---|
| ಸಾಕ್ಷಿದಾರನ/ಳ ಹೆಸರು | : ಶ್ರೀಮತಿ ಶಾಂತಾ ನಾಗಪ್ಪ ಸಂಕನಗೌಡರ |
| ತಂದೆಯ ಹೆಸರು | : ನಾಗಪ್ಪ |
| ವಯಸ್ಸು | : 42 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸಸ್ಥಳ | : ಸವದಿ, ಅಥಣಿ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 14.12.2023**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಆರೋಪಿತರ ಪರಿಚಯ ಇರುತ್ತದೆ. 1 ನೇ ಆರೋಪಿ ನನ್ನ ಭಾವ. 2 ನೇ ಆರೋಪಿ ನನ್ನ ಅಕ್ಕ ಆಗಬೇಕು. 3 ನೇ ಆರೋಪಿ ನನ್ನ ಭಾವ. 4 ನೇ ಮತ್ತು 5 ನೇ ಆರೋಪಿತರು 3 ನೇ ಆರೋಪಿಯ ಮಕ್ಕಳು ಇರುತ್ತಾರೆ. ಚಾಸಾ-1 ನನ್ನ ಗಂಡ . ಚಾಸಾ-2, 3 ರವರ ಪರಿಚಯ ಇರುತ್ತದೆ. ಚಾಸಾ-5 ನನ್ನ ಮಗಳು. ಚಾಸಾ-6, 7 ರವರ ಪರಿಚಯ ಇರುತ್ತದೆ.ಚಾಸಾ-8 ನನ್ನ ಮಗಳು. ಚಾಸಾ-9 ನನ್ನ ಅಳಿಯ. ನಮ್ಮ ಮತ್ತು ಆರೋಪಿತರ ನಡುವೆ ಜಮೀನಿನ ಸಂಬಂಧ ಜಗಳ ಆಗಿರುತ್ತದೆ. ದಿಃ 09.12.2017 ರಂದು 11.00 ಗಂಟೆಗೆ ನಾನು ಮತ್ತು ನನ್ನ ಮಗಳು ಚಾಸಾ-5, ನಮ್ಮ ಮನೆಯ ಮುಂದೆ ಇದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಜಮೀನನ್ನು ಬಿಟ್ಟು ಹೋಗಿ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. 1 ನೇ ಆರೋಪಿ ಕಬ್ಬಿಣದ ಸಲಾಕೆಯಿಂದ ನನ್ನ ಗಂಡನ ತಲೆಗೆ ಹೊಡೆದಿರುತ್ತಾರೆ. 3 ನೇ ಆರೋಪಿ ನನ್ನ ಗಂಡ ಚಾಸಾ1 ರವರಿಗೆ ಕೈಯಿಂದ ಹೋಡೆದಿರುತ್ತಾರೆ. ನಾನು ಮತ್ತು ಚಾಸಾ-5 ಜಗಳ ಬಿಡಿಸಲು ಹೋದಾಗ 4 ನೇ ಅರೋಪಿ ಜಗ್ಗಾಡಿ ಹೊಡೆದಿರುತ್ತಾರೆ. 4 ಮತ್ತು 5 ನೇ ಆರೋಪಿತರು ಚಾಸಾ-5 ರವರ ಕೈಯನ್ನು ಹಿಡಿದು ಜಗ್ಗಾಡಿ ಹೊಡೆದಿರುತ್ತಾರೆ. 2 ನೇ ಆರೋಪಿ ನನ್ನ ಕೈಯನ್ನು ಹಿಡಿದು ಜಗ್ಗಾಡಿ ಹೊಡೆದಿರುತ್ತಾರೆ. ಆಗ ಚಾಸಾ-6 ಮತ್ತು 7 ರವರು ಬಂದಾಗ ನಮಗೆ ಜಮೀನಿನಿಂದ ಬಿಟ್ಟು ಹೊಗುವಂತೆ ಜೀವ ಬೆದರಿಕೆ ಹಾಕಿರುತ್ತಾರೆ. ಆ ನಂತರ ನಾನು ಮತ್ತು ಚಾಸಾ-1 ಮತ್ತು 5 ರವರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿರುತ್ತೇವೆ. ಈ ಬಗ್ಗೆ ಚಾಸಾ-1

ದೂರು ದಾಖಲಿಸಿರುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಹಲ್ಲೆಗೆ ಉಪಯೋಗಿಸಿದ ಮುಮಾ-1 ನ್ನು ನೋಡಿ ಗುರುತಿಸುತ್ತಾರೆ. ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎ ವಿ ವಕೀಲರಿಂದಃ</u>**

ಚಾಸಾ–6 ಮತ್ತು 7 ರವರ ಜಮೀನು ನಮ್ಮ ಜಮೀನಿನ ಹತ್ತಿರು ಇರುವುದಿಲ್ಲ. ಚಾಸಾ–6 ಮತ್ತು 7 ರವರು ನಮ್ಮ ಜಮೀನಿನಿಂದ 2 ಕಿಮೀ ದೂರದಲ್ಲಿರುತ್ತಾರೆ. ಚಾಸಾ–2 ಮತ್ತು 3 ರವರು ನಮ್ಮ ಜಮೀನಿನಿಂದ 2 ಕಿಮೀ ದೂರದಲ್ಲಿರುತ್ತಾರೆ. ನನ್ನ ಗಂಡ ಚಾಸಾ–1 ರವರು, ಚಾಸಾ–2,3 ಮತ್ತು 6, 7 ರವರಿಗೆ ಉತ್ತಮ ಸಂಬಂಧ ಹೊಂದಿರುತ್ತಾರೆ. ನನ್ನ ಗಂಡ ಚಾಸಾ–1 ರವರು ಹೇಳಿದ ರೀತಿ ಸದರಿರವರು ಸಾಕ್ಷಿ ನುಡಿಯುವುದು, ಸಹಿ ಮಾಡುತ್ತಾರೆ. ಆದ್ದರಿಂದ ಸದರಿರವರು ಪೊಲೀಸಠಾಣೆಗೆ ಹೋಗಿ ಚಾಸಾ–1 ರವರು ಹೇಳಿದ ಕಾರಣ ಹೇಳಿಕೆ ನೀಡಿರುತ್ತಾರೆ. ಆದ್ದರಿಂದ ಚಾಸಾ–2, 3, 6 ಮತ್ತು 7 ರವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಲಾಗಿರುತ್ತದೆ. ನನ್ನ ಗಂಡನ ಹೇಳಿಕೆ ಪ್ರಕಾರ ನನ್ನ , ಚಾಸಾ–2, 3,6 ಮತ್ತು7 ರವರ ಸಾಕ್ಷಿಗಳನ್ನು ಈ ಪ್ರಕರಣದಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಈ ದಿನ ನಾನು ಚಾಸಾ–1 ನನ್ನ ಗಂಡನ ಹೇಳಿಕೆ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಆದ್ದರಿಂದ ಘಟನೆ ಬಗ್ಗೆ ಇವತ್ತಿನವರೆಗೂ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಈ ಕೇಸಿಗೆ ಅನೂಕೂಲವಾಗಲೀ ಎಂದು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಪಡೆದುಕೊಂಡು ಪ್ರಕರಣದಲ್ಲಿ ಹಾಜರು ಪಡಿಸಲಾಗಿರುತ್ತದೆ. ಮುಮಾ1 ರೀತಿಯ ವಸ್ತುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಅದೆ.**

4 ನೇ ಹೆಚ್ಚುವರಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.